## ಸಾಲಿಗ್ರಾಮದಿಂದ ಬೆಂಗಳೂರಿಗೆ ಸುವಿಹಾರಿ ಬಸ್ಸಿನ ಓಡಾಟ

೯೩೫ (೧೬೧೯) ಶ್ರೀ ಪಿ. ಬಸವರಾಜ (ಬ್ರಹ್ಮಾವರ್). ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಂಗಳೂರಿಗೆ ದಿನ ಪ್ರತಿ ಓಡಾಡುವ ಬಸ್ಸುಗಳೆಷ್ಟು ಮತ್ತು ಅದರಿಂದ ಬರುತ್ತಿರುವ ಆದಾಯವೆಷ್ಟು ?

ಆ) ಸಾಲಿಗ್ರಾಮದಿಂದ ಬೆಂಗಳೂರಿಗೆ ಪ್ರತಿ ದಿನ ಸುವಿಹಾರಿ ಬಸ್ಸನ್ನು ಓಡಿಸುವ ಕುರಿತು ಸರ್ಕಾರ ಆಲೋಚನೆ ಮಾಡಿದೆಯೇ ?

ಇ) ಹಾಗಿದ್ದಲ್ಲಿ, ಯಾವಾಗಿನಿಂದ ಪ್ರಾರಂಭ ಮಾಡುತ್ತೀರಿ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ದಕ್ಷಿಣ ಕನ್ನಡ ಜಿಲ್ಲೆಯ ನಾನಾ ಸ್ಥಳಗಳಿಂದ ಬೆಂಗಳೂರಿಗೆ ದಿನ ನಿತ್ಯ ೪೪ ಬಸ್ಸುಗಳನ್ನು ಓಡಿಸುತ್ತಲಿದೆ. ಹಾಗೂ ಬೆಂಗಳೂರಿನಿಂದ ಸಹ ಅಷ್ಟೇ ಬಸ್ಸುಗಳನ್ನು ಪ್ರತಿ ನಿತ್ಯ ದಕ್ಷಿಣ ಕನ್ನಡ ಜಿಲ್ಲೆಯ ಅದೇ ಸ್ಥಳಗಳಿಗೆ ಓಡಿಸುತ್ತಲಿದೆ. ೧೯೯೦ರ ಮೇ ತಿಂಗಳಿನಲ್ಲಿ ಪ್ರತಿ ನಿತ್ಯದ ಸರಾಸರಿ ಆದಾಯವು ರೂ. ೩೬೭೩೯.೦೦ ಗಳಾಗಿರುತ್ತದೆ.

ಆ) ಈಗ ಮಳೆಗಾಲ ಪ್ರಾರಂಭವಾಗಿರುವುದರ ಕಾರಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಸಾಲಿಗ್ರಾಮದಿಂದ ಸುಪಾಶೀನ ಸಾರಿಗೆಯನ್ನು ಪ್ರಾರಂಭಿಸಲು ಉದ್ದೇಶಿಸಿಲ್ಲ.

ಇ) ಉದ್ಭವಿಸುವುದಿಲ್ಲ.

## ಕನಕಗಿರಿಯ ಕನಕಾಚಲಪತಿ ದೇವಸ್ಥಾನವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಬಗ್ಗೆ

೯೩೬ (೧೬೦೮) ಶ್ರೀ ಎಂ. ಮಲ್ಲಿಕಾರ್ಜುನ (ಕನಕಗಿರಿ).—ಮಾನ್ಯ ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕನಕಗಿರಿಯ ಕನಕಾಚಲಪತಿ ಐತಿಹಾಸಿಕ ಪ್ರಸಿದ್ಧವಾಗಿದ್ದು ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಏನು ಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಹೌದು.

ಆ) ಈ ಸ್ಥಳವನ್ನು ಈಗಾಗಲೇ ಪ್ರವಾಸಿ ಕೇಂದ್ರವೆಂದು ಗುರುತಿಸಲಾಗಿದೆ.

## ಗಂಗಾವತಿ ಬಸ್ ಡಿಪೋ ಪೂರ್ಣ ಆಗದಿರುವುದು

೯೩೭ (೧೬೦೫) ಶ್ರೀ ಎಂ. ಮಲ್ಲಿಕಾರ್ಜುನ (ಕನಕಗಿರಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗಂಗಾವತಿ ಪಟ್ಟಣದಲ್ಲಿ ಬಸ್ ಡಿಪೋ ಕಟ್ಟಡ ಪ್ರಾರಂಭಗೊಂಡಿದ್ದು ಇಲ್ಲಿಯವರೆಗೂ ಪೂರ್ಣಗೊಂಡಿರುವುದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಪೂರ್ಣಗೊಳ್ಳಲಿಕ್ಕೆ ಇನ್ನು ಎಷ್ಟು ದಿನಗಳಾಗಬೇಕಾಗುತ್ತದೆ ?

ಇ) ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಆಗಿರುತ್ತದೆ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಬಂದಿದೆ.

ಆ) ನಾಲ್ಕು ತಿಂಗಳು.

ಇ) ಖರ್ಚಾದ ಹಣ ರೂ. ೧೬.೦೦ ಲಕ್ಷ.

## ಗಂಗಾವತಿ ತಾಲ್ಲೂಕಿನ ಏತ ನೀರಾವರಿ ಯೋಜನೆ

೯೩೮ (೧೬೦೭) ಶ್ರೀ ಎಂ. ಮಲ್ಲಿಕಾರ್ಜುನ (ಕನಕಗಿರಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗಂಗಾವತಿ ತಾಲ್ಲೂಕಿನಲ್ಲಿರುವ ಏತ ನೀರಾವರಿ ಯೋಜನೆಗಳು ಯಾವುವು, ಅವುಗಳ ಕಾರ್ಯ ಎಲ್ಲಿಯವರೆಗೂ ಬಂದಿದೆ ?

ಆ) ಇಲ್ಲಿಯವರಿಗೂ ಎಷ್ಟು ಹಣ ಖರ್ಚು ಆಗಿರುತ್ತದೆ. ಈ ಏತ ನೀರಾವರಿ ಯೋಜನೆ ಯಾವ ವರ್ಷದಲ್ಲಿ ಪೂರ್ಣಗೊಳ್ಳುವುದು ?

ಇ) ಈ ಯೋಜನೆಗಳಿಂದ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ದೊರಕುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಗಂಗಾವತಿ ತಾಲ್ಲೂಕಿನಲ್ಲಿ ಸಹಕಾರ ಸಂಘಗಳ ಮತಿಯಿಂದ ಡಿಪಾಸಿಟ್ ಕಾಂಟ್ರಿಬೂಷನ್ ರೀತ್ಯಾ ಕೈಗೊಳ್ಳಲಾದ ೩ ಏತ ನೀರಾವರಿ ಯೋಜನೆಗಳಿದ್ದು, ಆ ಯೋಜನೆಗಳ ಪ್ರಸ್ತುತ ಹಂತ ಕೆಳಕಂಡಂತಿವೆ.

೧) <u>ಕುಂಟೋಜಿ ಏತ ನೀರಾವರಿ</u> : ಜಾಕ್‌ವೆಲ್ ಕೆಲಸ ಪೂರ್ಣವಾಗಿದೆ ಹಾಗು ಇನ್‌ಟೇಕ್ ನಾಲೆಯ ೧೦೦ ಅಡಿ ಉದ್ದ ಪ್ರಪತಿಯಾಗಿದೆ.

೨) <u>ಉಳೇನೂರು ಏತ ನೀರಾವರಿ</u> : ಜಾಕ್‌ವೆಲ್ ಕೆಲಸ ಭೂಮಿಟ್ಟದವರೆಗೆ ಪ್ರಗತಿಯಾಗಿದೆ.

೩) <u>ಹೆಬ್ಬಾಳ ಏತ ನೀರಾವರಿ</u> : ಕೆಲಸಗಳು ಬಹುತೇಕ ಪೂರ್ಣವಾಗಿದ್ದು, ಇನ್‌ಟೇಕ್ ಕಾಮಗಾರಿಗಳ ಕೆಲಸ ಬಾಕಿಯಿದ್ದು ಯೋಜನೆ ಪೂರ್ಣಗೊಳಿಸಲು ಆರು ಲಕ್ಷ ರೂಪಾಯಿಗಳ ಹಣದ ಆಗತ್ಯವಿದೆ.

ಆ) ನೀರಾವರಿ ಇಲಾಖೆಯಿಂದ ಡಿಪಾಸಿಟ್ ಕಾಂಟ್ರಿಬ್ಯೂಶನ್ ಹಣದಲ್ಲಿ ಈವರೆಗೆ ಖರ್ಚಾಗಿರುವ ವೆಚ್ಚ ಕೆಳಕಂಡಂತಿದೆ ?

೧) ಉಳೇನೂರು — ೯.೭೫ ಲಕ್ಷ ರೂ.ಗಳು
೨) ಕುಂಟೋಜಿ — ೫.೦೦ ಲಕ್ಷ ರೂ.ಗಳು
೩) ಹೆಬ್ಬಾಳ — ೮.೬೪ ಲಕ್ಷ ರೂ.ಗಳು

ಯೋಜನೆಗಳಿಗೆ ಅಗತ್ಯವಿರುವ ಹಣ ಡಿಪಾಸಿಟ್ ಮಾಡಿದಲ್ಲಿ ಎರಡು ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸುವ ಸಾಧ್ಯತೆಯಿದೆ.

ಇ) ನೀರಾವರಿ ಉದ್ದೇಶಿಸಿರುವ ವಿವರಗಳು ಕೆಳಕಂಡಂತಿವೆ :

೧) ಉಳೇನೂರು — ೯೬೦ ಎಕರೆಗಳು
೨) ಕುಂಟೋಜಿ — ೧೫೫೨ ಎಕರೆಗಳು
೩) ಹೆಬ್ಬಾಳ — ೯೦೦ ಎಕರೆಗಳು